**<u>ದಿನಾಂಕ 11.08.2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರತಿಜ್ಞಾವಿಧಿ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ 1 ಮತ್ತು 2 ನೇ ಪ್ರತಿವಾದಿ ಪರ AMP ವಕೀಲರಿಂದ</u>**

ನನ್ನ ತಾಯಿ ಮತ್ತು ವಾದಿ ಮತ್ತು ಪ್ರತಿವಾದಿಯ ತಂದೆಯ ಅಕ್ಕ ಖಾಸ ಸಹೋದರಿಯರು ಆಗಿರುತ್ತಾರೆ. ನನ್ನ ತಾಯಿ ಮರಿಯವ್ವ ಮತ್ತು ಗೌರಮ್ಮ ಶಿವಣ್ಣನ ಸಹೋದರಿಯರು ಆಗಿರುತ್ತಾರೆ. ದಾವ ಆಸ್ತಿ ಶಿವಣ್ಣನಿಗೆ ಅವರ ತಂದೆ ತಾಯಿಯಿಂದ ಬಂದಿರುತ್ತದೆ. ಶಿವಣ್ಣ ಮತ್ತು ಅವರ ಸಹೋದರಿಯರ ನಡುವೆ ಭಾಗ ಆಗಿರುವುದಿಲ್ಲ. ಶಿವಣ್ಣನಿಗೆ ಇಬ್ಬರು ಹೆಂಡತಿಯರು ಎಂದರೆ ಸರಿ. ಹನುಮಂತರಾಯನ ತಾಯಿ ಹೆಸರು ಬಸ್ಸಮ್ಮ ಎಂದು ಇರುತ್ತದೆ. ಮಾನಶಮ್ಮಳಿಗೆ ಬಸ್ಸಮ್ಮ ಮತ್ತು ಬಸವರಾಜ ಎಂದು ಇಬ್ಬರು ಮಕ್ಕಳು ಇರುತ್ತಾರೆ ಎಂದರೆ ಸರಿ. ಬಸ್ಸಮ್ಮಳ ಮಗನ ಹೆಸರು

ಹನುಮಂತರಾಯ ಎಂದರೆ ಸರಿ. ಬಸ್ಸಮ್ಮ ಮತ್ತು ಬಸವರಾಜ ಶಿವಣ್ಣನ ಮಕ್ಕಳು ಎಂದರೆ ಸರಿಯಲ್ಲ. ಬಸ್ಸಮ್ಮ ಮತ್ತು ಬಸವರಾಜ ಇವರಿಗೆ ಶಿವಣ್ಣ ಭಾಗ ನೀಡಿರುವುದಿಲ್ಲ. ಬಸ್ಸಮ್ಮಳಿಗೆ 12 ಎಕರೆ ಜಮೀನನ್ನು ಶಿವಣ್ಣ ನೀಡಿರುವುದಿಲ್ಲ. ಶಿವಣ್ಣ ಜೀವಂತ ಅವಧಿಯಲ್ಲಿ ವಿಭಾಗ ಮಾಡಿ ಕೊಟ್ಟಿರುತ್ತಾನೆ ಎಂದರೆ ಸರಿಯಲ್ಲ. ಸಿದ್ದಮ್ಮ ಎಸಿ ಮತ್ತು ಡಿಸಿ ನ್ಯಾಯಾಲಯದಲ್ಲಿ ಪ್ರಕರಣ ದಾಖಲು ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ. ಸಿದ್ದಮ್ಮ ತನ್ನ ತಂದೆ ಆಸ್ತಿಯಲ್ಲಿ ಭಾಗಕ್ಕಾಗಿ ದಾವೆ ಮಾಡಿರುತ್ತಾಳೆ. ಸಿದ್ದಮ್ಮ ದಾವೆಯಲ್ಲಿ ದಾವ ಆಸ್ತಿ ತನ್ನ ತಾಯಿ ಆಸ್ತಿ ಎಂದು ದಾಖಲು ಮಾಡಿರುತ್ತಾಳೆ ಎಂದರೆ ಸರಿ. ದಾವ ಆಸ್ತಿಗಳನ್ನು ಶಿವಮ್ಮ ಅನುಭೋಗಿಸುತ್ತಿದ್ದಾಳೆ ಎಂದರೆ ಸರಿಯಲ್ಲ. ಶಿವಮ್ಮ ಎಷ್ಟು ವರ್ಷಗಳಿಂದ ದಾವ ಸ್ವತ್ತುಗಳನ್ನು ಅನುಭೋಗಿಸುತ್ತಿದ್ದಾಳೆ ಎಂದರೆ ನನಗೆ ಗೊತ್ತಿಲ್ಲ. ಶಿವಮ್ಮ ದಾವ ಆಸ್ತಿಯಲ್ಲಿ ಬೆಳೆದ ಬೆಳೆಗಳನ್ನು ಸಿದ್ದಮ್ಮಳಿಗೆ ನೀಡುತ್ತಿಲ್ಲ. ಶಿವಮ್ಮ ದಾವ ಸ್ವತ್ತನ್ನು ಅಂದಾಜು 30-40 ವರ್ಷಗಳಿಂದ ಒಬ್ಬಳೇ ಅನುಭೋಗಿಸುತ್ತಿದ್ದಾಳೆ. ಸಿದ್ದಮ್ಮಳು 30-40 ವರ್ಷಗಳಿಂದ ದಾವ ಆಸ್ತಿಗಳಲ್ಲಿನ ಬೆಳೆಯನ್ನು ಪಡೆದಿಲ್ಲ ಎಂದರೆ ಸರಿ. ಶಿವಮ್ಮಳನ್ನು ಶಿವಣ್ಣ ಮನೆಯಲ್ಲಿ ಇಟ್ಟುಕೊಂಡಿದ್ದ ಎಂದರೆ ಜೀತಕ್ಕೆ ಇಟ್ಟುಕೊಂಡಿದ್ದ ಎಂದು ನುಡಿಯುತ್ತಾರೆ.

<u>ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶವನ್ನು ಕೋರಿದ್ದರಿಂದ ಮುಂದೂಡಲಾಯಿತು.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.